

ಹೆಚ್ಚಿಸಿದ ಕವಿಗೆ ನಾನು ಇನ್ನೇನು ಕೊಡಬಲ್ಲೆ? ಒಬ್ಬಳು ನನ್ನಂಥ ಮನೆವಾಳ್ತೆಯ ಗೃಹಿಣಿ ಕೊಡಬಹುದಾದ ದೊಡ್ಡ ಗೌರವವಿದು ಎಂದು ನಿಮಗೂ ಅನ್ನಿಸೀತು. ನನಗೆ ಮಗಳು ಹುಟ್ಟಿದಾಗ ತಮಗೆ ಪತ್ರ ಬರೆದು ಅವಳಿಗೊಂದು ಹೆಸರು ಸೂಚಿಸಲು ಕೇಳಿದ್ದೆ. ತಾವು ಸೂಚಿಸಿದಂತೆ ಮಗಳಿಗೆ ಪ್ರಿಯದರ್ಶಿನಿ ಎಂದು ಹೆಸರಿಟ್ಟೆವು. ನನ್ನ ಮನೆಯವರೂ ತಮ್ಮ ಕವಿತೆಗಳ ಪ್ರೇಮಿ. ಹಾಗೆ ಹೆಸರಿಟ್ಟ ವರ್ಷದೊಳಗೇ ಮಕ್ಕಳೊಡನೆ ತಮ್ಮನ್ನು ಕಂಡು ಹಣ್ಣು ಹೂವು ನೀಡಿ ನಮಸ್ಕರಿಸಿ ಆಶೀರ್ವಾದ ಪಡೆದೆವು.

ಮಗಳು ನೀವು ಕೊಟ್ಟ ಹೆಸರಿನಂತೆ ಪ್ರಿಯವಾದುದನ್ನೇ ಹೇಳುವಳು, ನೋಡುವಳು, ಪ್ರಿಯವಾಗಿಯೇ ನಡೆದುಕೊಳ್ಳುವಳು. ಅವಳ ವ್ಯಕ್ತಿತ್ವದಲ್ಲಿ ಆ 'ಪ್ರಿಯವಾಗಿರುವುದು' ಎಂಬ ಅಂಶ ಎದ್ದುಕಾಣುವುದು. ನಾನು ಬಲ್ಲಂತೆ ಕನಿಷ್ಠ ಐವತ್ತು ಮಕ್ಕಳಿಗಾದರೂ ತಾವು ಹೆಸರು ಸೂಚಿಸಿದ್ದೀರಿ. ಯಾವುದೋ ಊರಿನ, ಯಾವಾವುದೋ ಜಾತಿಯ (ಮತದ) ಮಕ್ಕಳಿಗೆಲ್ಲ ತಾವು ಹೆಸರು ನೀಡಿದಿರಿ. ಹೆಸರೇ! ಕೆಲವು ಹೆಸರುಗಳು ವಾಕ್ಯಗಳಂತಿವೆ! ತಮಾಷೆ ಹಾಗಿರಲಿ, ನಾನು ಹೇಳಬೇಕಾದುದು ಬೇರೆಯದೇ ವಿಷಯ.

ಈ ಐವತ್ತೂ ಮಕ್ಕಳ ಜೀವನವನ್ನು ಕುರಿತು ಮಾಹಿತಿ ನನ್ನಲ್ಲಿದೆ. ಸುಮನಾ ಎಂಬ ಹೆಸರಿನ ಹುಡುಗಿ ಒಳ್ಳೆಯ ಮನಸ್ಸಿನವಳು. ಸೂರ್ಯಪ್ರಕಾಶ, ನಿರ್ದಿಗಂತ ಪ್ರಕಾಶ ಎಂಬ ಹೆಸರಿನ ಹುಡುಗರಿಬ್ಬರೂ ಪ್ರಕಾಶಮಾನರಾಗಿ ಬಾಳುತ್ತಿದ್ದಾರೆ. ಕಾನನಮಲ್ಲಿಕಾ ಎಂಬ ಹೆಸರಿನ ಹುಡುಗಿ ದೂರದ ಒಂದು ಕಾಡಿನ ನಡುವಿನ ಊರಿನಲ್ಲಿ ವಾಸವಾಗಿದ್ದಾಳೆ. ವಿಶ್ವವಿಜೇತ ಕುಮಾರ ಶುಕ್ರ ಎಂಬ ಹುಡುಗ ಒಲಿಂಪಿಕ್ಸ್‌ನಲ್ಲಿ ಓಟದ ಕ್ರೀಡೆಯೊಂದರಲ್ಲಿ ವಿಶ್ವ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾನೆ. ಸುಭಾಷಿಣಿ ಒಳ್ಳೆಯ ಮಾತಿನವಳು. ಪ್ರಶಾಂತಾ ಮೌನಗೌರಿಯದು ಮಾತೇ ಕಡಿಮೆ ಹಾಗೂ ಅವಳೊಡನಿರುವುದು ನಿಜಕ್ಕೂ ಅಪರೂಪದ ಪ್ರಶಾಂತಿಯ ಅನುಭವ ನೀಡುವಂಥದು. ಪ್ರಿಯ ಮಂದಸ್ಮಿತಾ, ನವಶಕುಂತಲಾ, ಚಿರಹರ್ಷಿತಾ, ಕೇಯೂರನರ್ತನ ವಿಲಾಸಕುಮಾರ, ಚಾರುತರ ವಿಲಾಸ ವರ್ಧನ ಕುಮಾರಿ... ಒಂದೇ ಒಂದು ಸಂದರ್ಭದಲ್ಲೂ ವ್ಯತ್ಯಾಸವಿಲ್ಲ. ಆಯಾ ವ್ಯಕ್ತಿಗೆ ಅದೇ ಹೆಸರು ಸೂಕ್ತ ಎಂಬಂತೆ ತಾವು ಇಟ್ಟಿರುವಿರಿ (ಕೊಟ್ಟಿರುವಿರಿ) ಅಥವಾ ತಾವು ಹೆಸರು ಸೂಚಿಸಿದ ಮೇಲೆ ಆ ಮಕ್ಕಳು ಹಾಗೆ ಬೆಳೆದಿದ್ದಾರೆ ಎನ್ನಲೇ? ಕವಿಗೆ ಆ ಶಕ್ತಿ ಇರುವುದೇ?

ಅದಕ್ಕಾಗಿಯೇ ಕವಿಯ ಬಳಿ, ದ್ರಷ್ಟಾರರ ಬಳಿ ಹೆಸರು ಕೇಳಿ ಇರಿಸುವ ರೂಢಿ ಬಂದಿರಬಹುದೇ?

ಸದಾ ಶಬ್ದಗಳೊಡನೆ ಆಟವಾಡುವ ಕವಿ, ಆ ಶಬ್ದಗಳ ಮೂಲಕವೇ ಜೀವಜಗತ್ತಿನ ಅಂತರಂಗವನ್ನೂ ಅಂತರಾತ್ಮವನ್ನೂ ಸ್ಪರ್ಶಿಸಿಬಿಡುವನೇ? ನನಗಂತೂ ಹಾಗೇ ತೋರುತ್ತಿದೆ.

ನನ್ನ ಬಳಿ ಇರುವ ಮಾಹಿತಿ ಇಷ್ಟೇ. ತಾವು ನೂರಾರು ಮಕ್ಕಳಿಗೆ ಹೆಸರಿಡುವುದು ನನಗೆ ಗೊತ್ತು. ಕೆಲವು ಶಾಲೆ, ಕಾಲೇಜುಗಳಿಗೂ ಹಾಗೆಯೇ ಅಭಿಧಾನ ನೀಡಿರುವಿರಿ. ನಿಮ್ಮ ಕಾವ್ಯ ಪಡೆದಿರುವ ಸಿದ್ಧಿಯ ಮುಂದೆ ಈ ಸಂಗತಿ ಹೆಚ್ಚು ಮಹತ್ವದ್ದಾಗಿ ನಿಮಗೆ ತೋರುತ್ತಿರಲಾರದು. ಆದರೂ ದಯಮಾಡಿ ಈ ಕುರಿತು ತಾವು ಬೆಳಕು ಚೆಲ್ಲಬೇಕು. ನನಗೆ ಆಶ್ಚರ್ಯವೆಂದರೆ ತಮ್ಮ ಈ ಶಬ್ದಸಿದ್ಧಿಯ ಕುರಿತು ಈವರೆಗೆ ತಾವು ಎಲ್ಲೂ ಮಾತಾಡಿಲ್ಲ, ಏನೂ ಹೇಳಿಲ್ಲ.

ಉತ್ತರ ನಿರೀಕ್ಷಿಸಬಹುದೇ?

ತಮ್ಮ ಅಭಿಮಾನಿ,

ಮಾಲಿನಿ

ಪತ್ರ ಓದಿದ ಕವಿಗಳು ನೀಲಿ ಶಾಯಿಯಲ್ಲಿ ದಪ್ಪವಾಗಿ ಉದ್ಗಾರವಾಚಕ (!) ಬರೆದು ಸಹಿ ಮಾಡಿದ್ದರು. ಇದನ್ನು ಏನೆಂದು ಅರ್ಥೈಸಿಕೊಳ್ಳಬೇಕೆಂದು ಶ್ರೀಧರನಿಗೆ ಅರ್ಥವಾಗಲಿಲ್ಲ. ■